ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಅಪರಾಧ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ವಾಣಿ    ದಿನಾಂಕ : DATE : 2/12/19

## ಹನಿಟ್ರ್ಯಾಪ್‌ನಲ್ಲಿ 20 ಮಂದಿ, ಒಂದೇ ಪ್ರಕರಣ ದಾಖಲು!

ಬೆಂಗಳೂರು: ಹನಿಟ್ರ್ಯಾಪ್ ಪ್ರಕರಣದಲ್ಲಿ ಈವರೆಗೆ 20ಕ್ಕೂ ಹೆಚ್ಚು ಪ್ರಭಾವಿಗಳು ಸಿಲುಕಿರುವುದು ಬಯಲಾಗಿದ್ದರೂ ಈವರೆಗೆ ಒಂದೇ ಕೇಸ್ ದಾಖಲಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಹನಿಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುವ ಪ್ರಭಾವಿಗಳು ವಿಡಿಯೋ ಸಾಕ್ಷ್ಯ ನಾಶಪಡಿಸುವಂತೆ ಸಿಸಿಬಿ ಪೊಲೀಸರ ಮೇಲೆ ಒತ್ತಡ ಹೇರುತ್ತಿರುವುದರಿಂದ ಆರೋಪಿಗಳನ್ನು ಅವಧಿಗೆ ಮೊದಲೇ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದಾರೆ. ಪುಟ 7

# ಹನಿಟ್ರ್ಯಾಪ್ ವಿಡಿಯೋ ನಾಶಕ್ಕೆ ಸಿಸಿಬಿ ಮೇಲೆ ಒತ್ತಡ!

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹನಿಟ್ರ್ಯಾಪ್ ಪ್ರಕರಣ ಇಡೀ ದೇಶದ ಗಮನ ಸೆಳೆದು ಚರ್ಚೆಗೆ ಗ್ರಾಸವಾಗಿದೆ. ಆದರೆ, ಟ್ರ್ಯಾಪ್‌ನಲ್ಲಿ 20ಕ್ಕೂ ಹೆಚ್ಚು ಪ್ರಭಾವಿಗಳು ಸಿಲುಕಿದ್ದರೂ ಒಂದು ಕೇಸ್ ಮಾತ್ರ ದಾಖಲಾಗಿದೆ. ಉಳಿದವರ್ಯಾರೂ ದೂರು ದಾಖಲಿಸಲು ಮುಂದೆ ಬರುತ್ತಿಲ್ಲ. ಬದಲಾಗಿ ಸಿಕ್ಕಿರುವ ವಿಡಿಯೋಗಳನ್ನು ನಾಶಪಡಿಸುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.



» ಅಧಿಕಾರಿಗಳಿಗೆ ಪ್ರಭಾವಿಗಳ ದುಂಬಾಲು

ಪ್ರಕರಣ ಸಂಬಂಧ ರಾಘವೇಂದ್ರ, ಪುಷ್ಪ, ಮಂಜುನಾಥ ಹಾಗೂ ಕಲ್ಪನಾ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ನ.25ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ರಾಘವೇಂದ್ರನನ್ನು 10 ದಿನ (ಡಿ.4ರವರೆಗೆ)ವಶಕ್ಕೆ ಪಡೆದಿದ್ದರು. ಆರು ದಿನಗಳವರೆಗೆ ವಿಚಾರಣೆ ನಡೆಸಿರುವ ಪೊಲೀಸರು, ಶನಿವಾರ (ನ.30) ರಾತ್ರಿ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹನಿಟ್ರ್ಯಾಪ್‌ನಲ್ಲಿ ವಿವಿಧ ಪಕ್ಷಗಳ ಶಾಸಕರು ಹಾಗೂ ಪ್ರಮುಖ ರಾಜಕಾರಣಿಗಳು ಸಿಲುಕಿರುವುದು ತನಿಖೆಯಿಂದ ಬಯಲಾಗಿದೆ. ಈ ಬಗ್ಗೆ ಯಾರೊಬ್ಬರು ದೂರು ಕೊಡಲು ಮುಂದಾಗುತ್ತಿಲ್ಲ. ಉತ್ತರ ಕರ್ನಾಟಕ ಭಾಗದ ಹಿರಿಯ ಶಾಸಕರು ಕೊಟ್ಟ ದೂರಿನ ಮೇಲೆ ತನಿಖೆ ನಡೆದಿದೆ.



## ದೂರು ದಾಖಲಿಸಲು ಹಿಂದೇಟು

ಹನಿಟ್ರ್ಯಾಪ್‌ನಲ್ಲಿ ಸಿಲುಕಿ ದೂರು ಕೊಡಲು ಹಿಂದೇಟು ಹಾಕಿರುವ ಶಾಸಕರು, ವಿಡಿಯೋ ನಾಶಪಡಿಸುವಂತೆ ಸಿಸಿಬಿಗೆ ದುಂಬಾಲು ಬಿದ್ದಿದ್ದಾರೆ. ದೂರು ಕೊಟ್ಟರೆ, ಖಾಸಗಿ ವಿಡಿಯೋಗಳನ್ನು ಸಾಕ್ಷಿಗಾಗಿ ಪರಿಗಣಿಸಿ ಕೋರ್ಟ್‌ಗೆ ಹಾಜರುಪಡಿಸಬೇಕು. ಅಲ್ಲದೇ, ವಿಚಾರಣೆ ವರ್ಷಾನುಗಟ್ಟಲೆ ನಡೆಯಬಹುದು. ಆ ವಿಡಿಯೋಗಳು ಮುಂದೊಂದು ದಿನ ಬಹಿರಂಗವಾದರೆ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗಲಿದೆ ಎಂಬ ಕಾರಣಕ್ಕೆ ಯಾರೊಬ್ಬರೂ ದೂರು ಕೊಡುತ್ತಿಲ್ಲ. ಈಗಾಗಲೇ ದಾಖಲಾಗಿರುವ ಕೇಸ್‌ಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ಹೊರತುಪಡಿಸಿ, ಇನ್ನುಳಿದ ವಿಡಿಯೋಗಳನ್ನು ನಾಶ ಮಾಡುವಂತೆ ಹಿರಿಯ ಸಚಿವರ ಮೂಲಕ ಒತ್ತಡ ತರುತ್ತಿದ್ದಾರೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

## ಇಂಥ ಅಪಪ್ರಚಾರ ಹೊಸದೇನಲ್ಲ..



ಶಿರಸಿ: ಗಣ್ಯರ ಜತೆಗಿನ ಹನಿಟ್ರ್ಯಾಪ್ ಪ್ರಕರಣ ಶುದ್ಧ ಬೋಗಸ್. ಚುನಾವಣೆ ಅಂತಿಮ ಹಂತದಲ್ಲಿ ಇಂಥ ಅಪಪ್ರಚಾರ ಸಾಮಾನ್ಯ ಎಂದು ಯಲ್ಲಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಿವರಾಮ ಹೆಬ್ಬಾರ ತಿರುಗೇಟು ನೀಡಿದರು. ಪ್ರಕರಣದಲ್ಲಿ ನನ್ನ ಹೆಸರು ತಳಕು ಹಾಕುತ್ತಿರುವುದು ಅಪಪ್ರಚಾರಕ್ಕಾಗಿ ಹೊರತು ಬೇರೆ ಉದ್ದೇಶದಿಂದಲ್ಲ. ನಾಲ್ಕು ದಶಕಗಳ ರಾಜಕೀಯ ಬದುಕಿನಲ್ಲಿ ಇಂಥ ಅಪಪ್ರಚಾರ ಹೊಸದಲ್ಲ. ಹಾಗಾಗಿ ಅಪಪ್ರಚಾರ ಮಾಡುವವರಿಗೆ ನಾವೆಂದೂ ಅಡ್ಡಿಪಡಿಸುವುದಿಲ್ಲ ಎಂದರು.

## ಡಿಸೆಂಬರ್ ಬಳಿಕ ಫ್ಲ್ಯಾಟ್ ಕೊಡಿಸುವ ಭರವಸೆ

ಹನಿಟ್ರ್ಯಾಪ್‌ಗೆ ಸಿಲುಕಿರುವ ಅನರ್ಹ ಶಾಸಕ, ಡಿಸೆಂಬರ್ ಬಳಿಕ ಬೆಂಗಳೂರಿನಲ್ಲಿ ಫ್ಲ್ಯಾಟ್‌ಕೊಡಿಸುವುದಾಗಿ ಯುವತಿಗೆ ಭರವಸೆ ಕೊಟ್ಟಿದ್ದರು ಎಂಬ ಮಾಹಿತಿ ತನಿಖೆಯಿಂದ ಬೆಳಕಿಗೆ ಬಂದಿದೆ. ಶಾಸಕ ಸ್ಥಾನದಿಂದ ಅನರ್ಹ ಆಗುವ ಮೊದಲು ಬೆಂಗಳೂರಿನ ಪಂಚತಾರ ಹೋಟೆಲ್‌ನಲ್ಲಿ ಯುವತಿಯನ್ನು ಭೇಟಿಯಾಗಿದ್ದರು. ಆ ಬಳಿಕ ನಿರಂತರ ಫೋನ್ ಮಾಡಿ 'ಬೆಂಗಳೂರು ಸೇಫ್ ಅಲ್ಲ. ದೆಹಲಿಗೆ ಬಾ, ಮುಂಬೈಗೆ ಬಾ..' ಎಂದು ಯುವತಿಗೆ ಪೀಡಿಸುತ್ತಿದ್ದರು. ಇದನ್ನೆ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು ಯುವತಿಯರನ್ನು ಬಿಟ್ಟು ಏಕಾಂತದ ದೃಶ್ಯಗಳನ್ನು ಚಿತ್ರೀಕರಿಸಿಕೊಂಡಿದ್ದಾರೆ. ವಿಡಿಯೋ ಇಟ್ಟುಕೊಂಡು ಹಣಕ್ಕಾಗಿ ಬ್ಲಾಕ್ ಮೇಲ್ ಮಾಡತೊಡಗಿದ್ದರು. ಚುನಾವಣೆ ನಂತರ ಬೆಂಗಳೂರಿನಲ್ಲಿ ಫ್ಲ್ಯಾಟ್‌ವೊಂದನ್ನು ಖರೀದಿಸಿ ಕೊಡುವುದಾಗಿ ಮಾತುಕೊಟ್ಟಿದ್ದರು. ಇದು ಆರೋಪಿಗಳ ಬಳಿ ಸಿಕ್ಕಿರುವ ಆಡಿಯೋ ರೆಕಾರ್ಡ್‌ನಿಂದ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.